ಕನ್ನಡಪ್ರಭ

# ಜೈನ್ ವಿವಿಗೆ ಸಮಗ್ರ ಪ್ರಶಸ್ತಿ

**ಬೆಂಗಳೂರು:** ಕಳೆದ ಐದು ದಿನಗಳಿಂದ ನಡೆದ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯ ಈಜು ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಆತಿಥೇಯ ಜೈನ್ ವಿವಿ ತಂಡ ಸಮಗ್ರ ಚಾಂಪಿಯನ್ ಪ್ರಶಸ್ತಿ ಗೆದ್ದುಕೊಂಡಿದೆ.

ಗುರುವಾರ ಮುಕ್ತಾಯಗೊಂಡ ಚಾಂಪಿಯನ್‌ಶಿಪ್‌ನಲ್ಲಿ ಜೈನ್ ವಿವಿ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು. ಪುರುಷರ ವಿಭಾಗದಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 65 ಅಂಕಗಳೊಂದಿಗೆ ಪ್ರಶಸ್ತಿ ಪಡೆದುಕೊಂಡಿದೆ. ಇನ್ನು ಪಂಜಾಬ್ ವಿವಿ 62 ಅಂಕಗಳನ್ನು ಪಡೆದುಕೊಂಡು 2ನೇ ಸ್ಥಾನ ಪಡೆಯಿತು. ಇನ್ನು ಮಹಿಳೆಯರ ವಿಭಾಗದಲ್ಲಿ ಆತಿಥೇಯ ಜೈನ್ ವಿವಿ 106 ಅಂಕಗಳನ್ನು ಪಡೆದುಕೊಂಡು ಚಾಂಪಿಯನ್ ಪಟ್ಟ ಪಡೆಯಿತು. ಇನ್ನು ದೆಹಲಿ ವಿವಿ 60 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆಯಿತು. ಇನ್ನು ಜೈನ್ ವಿವಿಯ ಮೀನಾಕ್ಷಿ ವಿಕೆಆರ್ ಅತ್ಯುತ್ತಮ ಮಹಿಳಾ ಈಜುಪಟು ಪ್ರಶಸ್ತಿ ಪಡೆದರೆ, ವಿಟಿಯುನ ಅರವಿಂದ್ ಎಂ ಅತ್ಯುತ್ತಮ ಪುರುಷ ಈಜುಪಟು ಪ್ರಶಸ್ತಿ ಪಡೆದರು.

ಚಾಂಪಿಯನ್‌ಶಿಪ್‌ನ ಅಂತಿಮ ದಿನವೂ ಮಿಂಚಿನ ಪ್ರದರ್ಶನ ತೋರಿದ ಜೈನ್ ವಿವಿಯ ಮೀನಾಕ್ಷಿ ವಿಕೆಆರ್, ಎರಡು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ಮಹಿಳೆಯರ 100 ಮೀ. ಫ್ರೀಸ್ಟೈಲ್ ಹಾಗೂ 200 ಮೀ. ಫ್ರೀಸ್ಟೈಲ್‌ನಲ್ಲಿ ಮೀನಾಕ್ಷಿ ಸ್ವರ್ಣ ಸಾಧನೆ ಮಾಡಿದ್ದಾರೆ.




ಸಮಗ್ರ ಚಾಂಪಿಯನ್ ಜೈನ್ ವಿವಿ ತಂಡ

## ಚಾಂಪಿಯನ್‌ಶಿಪ್‌ನ ಅಂತಿಮ ಹಾಗೂ ಐದನೇ ದಿನದ ಫಲಿತಾಂಶ

ಪುರುಷರ ವಿಭಾಗ: 100 ಮೀ. ಫ್ರೀಸ್ಟೈಲ್- 1.ನೀಲ್ ಕಂಟ್ರಾಕ್ಟರ್, 2.ಅಮನ್ ಘಾಯ್, 3.ವಿರಾಜ್ ಧೊಖಲೆ, (53.56).
100 ಮೀ. ಬ್ರೆಸ್ಟ್‌ಸ್ಟ್ರೋಕ್ - 1.ಜಷನ್‌ದೀಪ್ ಸಿಂಗ್, 2-ಪುಲ್‌ಕಿತ್, 3.ದೀಪಕ್ ಕುಮಾರ್, (1:05.56).
200 ಮೀ. ಫ್ರೀಸ್ಟೈಲ್- 1.ಬಾಬಿ ರಾಣಾ, 2-ಮಿತೇಶ್ ಕುಂಟೆ, 3.ಕುನಾಲ್ ಮೋಹಿತ್, (2:09.02).

ಮಹಿಳೆಯರ ವಿಭಾಗ: 100 ಮೀ. ಫ್ರೀಸ್ಟೈಲ್- 1.ಮೀನಾಕ್ಷಿ (ಜೈನ್ ವಿವಿ), 2.ಸ್ನೇಹಾ ಟಿ, 3.ಸಂಧ್ಯಾ ಎಸ್, (1:01.44).
100 ಮೀ. ಬ್ರೆಸ್ಟ್‌ಸ್ಟ್ರೋಕ್ - 1.ಪ್ರಿಯಾಂಕ, 2.ಪೂರ್ವಾ ಶೆಟ್ಟಿ (ಜೈನ್ ವಿವಿ), 3.ದಿವ್ಯಾ ಗುರುಸ್ವಾಮಿ (ವಿಟಿಯು), (1:18.47).
200 ಮೀ. ಫ್ರೀಸ್ಟೈಲ್- 1.ಮೀನಾಕ್ಷಿ (ಜೈನ್ ವಿವಿ), 2.ವಂದಿತಾ, 3.ಸೃಷ್ಟಿ ನಾಗ್, (2:30.44).